ಶ್ರೀ ಜಿ. ಎಸ್. ನಾಗಪ್ಪ : ಮಾನ್ಯ ಸಭಾಧ್ಯಕ್ಷರೆ, ಇಲ್ಲಿಗೆ ಒಂದು ಆಸ್ಪತ್ರೆ ಸುಮಾರು 3 ವರ್ಷಗಳ ಹಿಂದೆ ಮಂಜೂರಾಗಿದ್ದು ಈಗಾಗಲೇ ಅಲ್ಲಿ ಒಂದು ಆಸ್ಪತ್ರೆ ಕಟ್ಟಿಡ ಇದೆ ಮತ್ತು ಅಲ್ಲಿ ಕಾಂಪೌಂಡರಗಳೂ ಕೂಡ ಇದ್ದಾರೆ. ಸುಮಾರು 3 ವರ್ಷಗಳಿಂದ ಇಲ್ಲಿಗೆ ಔಷಧಿಗಳನ್ನು ಒದಗಿಸುತ್ತಿದ್ದಾರೆ. ಈಗಲೂ ಕೂಡ ಪ್ಯಾಕೆಟ್ಟನ್ನು ಬಿಚ್ಚಿದರೆ ಆ ಔಷಧಿಗಳು ಎಕ್ಸಪೈರಿ ಆಗಿ ಹೋಗುತ್ತಿವೆ. ಅಲ್ಲಿ ಒಂದು ಆಸ್ಪತ್ರೆ ಇರುವುದಂತೂ ನಿಜ. ಅದಕ್ಕೆ ಇಪ್ಪತ್ತನಾಲ್ಕರಗೂ ಯಾರೂ ಡಾಕ್ಟರನ್ನು ಹಾಕಲ್ಲ. ಈಗ ಹಾಕುತ್ತಾರಯ್ಯ!? ಅಮೇಲೆ ಏನು ಮಾಡುತ್ತಾರೆ ಏನ್ನುವುದನ್ನು ದಯವಿಟ್ಟು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷರೇ, ಈ ಕ್ಷೇತ್ರದಲ್ಲಿ ಒಂದು ಆಯುರ್ವೇದಿಕ್ ಆಸ್ಪತ್ರೆ ಇದ್ದು ಅದು ಕೆಲಸ ಮಾಡುತ್ತಿದೆ. ಆದರೆ ಇವರು ಕೇಳುತ್ತಿರುವಷ್ಟಕ್ಕೆಂಥಾದ್ದು, ಪ್ರಾಥಮಿಕ ಆರೋಗ್ಯ ಕೇಂದ್ರವೊಂದು ಆಗಬೇಕು ಎಂದು. 10 ಕಿಲೋಮೀಟರ್ ಒಳಗಡೆ ಸುಮಾರು ನಾಲ್ಕೈದು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇರೆ ಜಾಗದಲ್ಲಿ ಕೆಲಸ ಮಾಡುತ್ತಿವೆ. ಇನ್ನೊಂದು ಕಾಮಗರ ಎಂದು ಹೇಳುವಂಥ ಸ್ಥಳದಲ್ಲಿ ಸುಮಾರು 6 ಕಿಲೋಮೀಟರ್ ದೂರದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಬೇಕು ಎಂದು ಹೇಳುತ್ತಿದ್ದಾರೆ, ಇವರ ಅವಶ್ಯಕತೆಯನ್ನೂ ಕೂಡ ಸರ್ಕಾರ ಗಮನಕ್ಕೆತೆಗೆದುಕೊಂಡು, ಬಹುಶಃ ಒಂದು ಸರ್ವೆ ಮಾಡಿ ಮುಂದಿನ ವರ್ಷದಲ್ಲಿ ಈ ದಿಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿದ್ದರೆ ಬಹುಶಃ ನಾನು ಅದಕ್ಕೆ ಪ್ರಯತ್ನವನ್ನು ಪಡುತ್ತೇನೆ.

ಶ್ರೀ ಜಿ. ಎಸ್. ನಾಗಪ್ಪ : ಆಸ್ಪತ್ರೆ ಮಂಜೂರಾಗಿದೆ. ಮಂಜೂರಾಗಿ ಸುಮಾರು 3 ವರ್ಷವಾಗಿದೆ. ಇವತ್ತಿನವರೆಗೂ ಅಲ್ಲಿಗೆ ಒಬ್ಬ ಡಾಕ್ಟರನ್ನು ಹಾಕಿಲ್ಲ. ಅಲ್ಲಿ ಔಷಧಿಗಳೆಲ್ಲಾ ಹಾಳಾಗಿ ಹೋಗುತ್ತಿವೆ. ಅದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ನಾಣಯ್ಯ : ಮಂಜೂರಾದಂಥ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದರೆ ಅದನ್ನು ತುಂಬಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

ಹಾಸನದ 1000 ಹಾಸಿಗೆಯ ಆಸ್ಪತ್ರೆಯ ಪ್ರಗತಿ

162 - ಶ್ರೀ ಜೆ. ಶಿವರಾಮ (ಗಂಜಿಷಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ 1000 ಹಾಸಿಗೆಯ ಆಸ್ಪತ್ರೆ ಪ್ರಗತಿ ಯಾವ ಹಂತದಲ್ಲಿದೆ.

ಆ) ಪಿಪ್ಪ ಯೋಜನೆಯಡಿಯಲ್ಲಿ ಈ ಆಸ್ಪತ್ರೆಗೆ ಒದಗಿಸಲು ಕೈಗೊಂಡಿರುವ ಕ್ರಮವೇನು?

ಇ) 1000 ಹಾಸಿಗೆಗೆ ಸರ್ಕಾರ ಮಂಜೂರಾತಿ ಕೊಟ್ಟಾಗ ಮಂಜೂರಾತಿ ಮಾಡಿದ ನಕ್ಷೆ ಮತ್ತು ಯೋಜನೆಯಲ್ಲಿ ಬದಲಾವಣೆ ಇದೆಯೇ? ಇದ್ದಲ್ಲಿ ಏನೇನು?

ಡಾ॥ ಹೆಚ್. ಸಿ ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಒಪಿಡಿ ವಿಭಾಗದ ನೆಲ ಮತ್ತು ಮೊದಲ ಅಂತಸ್ತಿನ ಕಾಮಗಾರಿ ಮುಗಿದಿದ್ದು, ಒಳರೋಗಿಗಳ ವಿಭಾಗ ಮತ್ತು ಇನ್ನಿತರ ವಿಭಾಗಗಳ ಕಟ್ಟಡದ ಕಾಮಗಾರಿ ನಡೆದಿದ್ದು, ವಿವಿಧ ಹಂತದಲ್ಲಿರುತ್ತದೆ.

ಆ) ವಿಶ್ವಬ್ಯಾಂಕ್ ಯೋಜನೆಯಲ್ಲಿ ಈ ಕಾಮಗಾರಿಗಳನ್ನು ಕೈಗೊಂಡು ಮುಗಿಸಲು ಉದ್ದೇಶಿಸಿದ್ದು, ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿದೆ.

ಇ) 1000 ಹಾಸಿಗೆಯ ಸರ್ಕಾರದ ಮಂಜೂರಾತಿ ಮಾಡಿದ ನಕ್ಷೆ ಮತ್ತು ಯೋಜನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

-ಉದ್ಭವಿಸುವುದಿಲ್ಲ-.

ಶ್ರೀ ಜಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಹಾಸನದ 1,000 ಹಾಸಿಗೆಯ ಆಸ್ಪತ್ರೆಯ ಪ್ರಗತಿ ಯಾವ ಹಂತದಲ್ಲಿದೆ ಎನ್ನುವುದನ್ನು ಕೊಟ್ಟಿದ್ದಾರೆ. ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಆಸ್ಪತ್ರೆಗೆ ಹಣ ಒದಗಿಸಲು ಕೈಗೊಂಡಿರುವ ಕ್ರಮ ಏನು ಎಂದು ಹೇಳಿದ್ದಾರೆ. ಪ್ರಾಮುಖ್ಯವಾಗಿ ನಾನು ಒಂದು ಸಾವಿರ ಹಾಸಿಗೆಗೆ ಸರ್ಕಾರ ಮಂಜೂರಾತಿ ಕೊಟ್ಟಾಗ, ಮಂಜೂರಾತಿ ಮಾಡಿದ ನಕ್ಷೆ ಮತ್ತು ಯೋಜನೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು. ಆದರೆ, ಅಧ್ಯಕ್ಷರೇ, ಇವರೇ ಒಂದು ಆದೇಶ ಹೊರಡಿಸಿದ್ದಾರೆ, 3-12-95ರಲ್ಲಿ. ಅದು 5-1-96ಕ್ಕೆ ತಲುಪಿದೆ. ಅದರಲ್ಲಿ ಸ್ಪಷ್ಟವಾಗಿ ಆದೇಶ ನೀಡಿದ್ದಾರೆ. ಹಾಸನ ನಗರದ ಆಸ್ಪತ್ರೆಯ ಕಟ್ಟಡವನ್ನು 150 ಹಾಸಿಗೆಯ ಆಸ್ಪತ್ರೆಯ ಕಟ್ಟಡವನ್ನಾಗಿ ಸೀಮಿತಗೊಳಿಸುವ ಬಗ್ಗೆ ಎಂದು. ಮತ್ತೆ ಮುಂದೆ ಹೇಳುತ್ತಾರೆ, ಅದರಂತೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರು ಹಾಸನದ ಹೊಸ ಒ.ಪಿ.ಡಿ ವಿಭಾಗದಲ್ಲಿ ಹೆಚ್ಚುವರಿಯಾಗಿ 150 ಹಾಸಿಗೆಗಳನ್ನು ಆಳವಡಿಸಲು, ಮುಖ್ಯ ವಾಸ್ತುಶಿಲ್ಪಿಗಳ ಮುಖಾಂತರ ನಕ್ಷೆ ತಯಾರಿಸಿ ಮುಖ್ಯ ಇಂಜಿನಿಯರ್ ದಕ್ಷಿಣ ವಲಯ ಇವರಿಗೆ ಆದಷ್ಟೆ ಮಂಜೂರಾತಿಯನ್ನು ಕೊಡತಕ್ಕಂಥಾದ್ದು ಎಂದು. ಅಂದರೆ ಈಗ ಒಂದೂವರೆ ಅಥವಾ ಎರಡು ತಿಂಗಳ ಹಿಂದೆ ಕೊಟ್ಟಿರತಕ್ಕಂಥಾದ್ದು ಇದು, ನಕ್ಷೆಯ ಬದಲಾವಣೆ ಬಗ್ಗೆ. ಮೊದಲು ಏನು ಮಂಜೂರಾತಿ 26 ಲಕ್ಷ ರೂಪಾಯಿಗಳ ಕಟ್ಟಡ ಸಾವಿರ ಹಾಸಿಗೆಯದು ಒಂದು ಇತ್ತೋ, ಆ ಒರಿಜಿನಲ್ ಪ್ಲಾನಲ್ಲಿ ಡೀವಿಯೇಷನ್ ಇದೆಯೇ, ನಕ್ಷೆಯಲ್ಲಿ ಬದಲಾವಣೆ ಇದೆಯೇ ಎನ್ನತಕ್ಕಂಥಾದ್ದಕ್ಕೆ ತಾವೇ ಮಾಡಿರತಕ್ಕಂಥ ಸರ್ಕಾರದ ಸ್ಪಷ್ಟ ಆದೇಶವಿದೆ. ಅದಕ್ಕೆ ಒಂದು ಸೂಕ್ತವಾದಂಥ ಮಾಹಿತಿ ಬೇಕು. ಎರಡನೆಯದು, ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೌಲಭ್ಯ ಕೊಡಲು ಉದ್ದೇಶಿಸಿ ಸರ್ಕಾರ ತೀರ್ಮಾನ ತಗೆದುಕೊಂಡಿದೆ. ಮುಗಿಸುತ್ತೇವೆ ಎಂದು ಹೇಳಿದ್ದಾರೆ. ಈಗ ನನಗೆ ಗೊತ್ತಿರುವ ಪ್ರಕಾರ ಕರ್ನಾಟಕ ಹೆಲ್ತ್ ಸಿಸ್ಟಮ್ ಡೆವಲಪ್‌ಮೆಂಟ್ ಅಂಡರ್ ವರ್ಲ್ಡ್ ಬ್ಯಾಂಕ್ ಏಡೆಡ್ ಪ್ರಾಜೆಕ್ಟ್ ಎಂದು ಒಂದು ಸೆಮಿನಾರ್ ಮಾಡಿ ಒಂದು ವಾರ ಎಲ್ಲಾ ಸೇರಿ ಮಾಡಿದ್ದಾರೆ. ಆರೋಗ್ಯ ಸಚಿವರು ಕಾಣಿಸ್ತಿಲ್ಲ. ಅವರು ಇದ್ದಿದ್ದರೆ ಇದು ಕ್ಲಿಯರಾಗಿ ಗೊತ್ತಾಗುತ್ತಿತ್ತು, ಚರ್ಚೆಯಾಗಿದ್ದನ್ನ. ಮಂತ್ರಿಗಳು

ಎಲ್ಲಿ ಹೋದರೂ ಗೊತ್ತಾಗುತ್ತಿಲ್ಲ. ಆದರಲ್ಲಿ ಏನಾಗಿದೆ ಎಂದರೆ ಈ ಶಾಖೆಯ ಆಸ್ಪತ್ರೆಗೆ ಒದಗಿಸಬೇಕು ಎಂದು ಮೊದಲು 1992ರಲ್ಲಿ ಯಾವ ಪ್ಲಾನ್ ಆಂಡ್ ಎಸ್ಟಿಮೇಟ್ ಅಪ್ರೂವ್ ಮಾಡಿ ಮಾಡಿದ್ದರೋ, ಆದರಲ್ಲಿ ಡೀವಿಯೇಟ್ ಆಗಿ ಶಾಖೆಯ ಬದಲು 500 ಆಸ್ಪತ್ರೆಗೆ ಸೌಲಭ್ಯವನ್ನು ಒದಗಿಸತಕ್ಕಂಥಾದ್ದಕ್ಕೆ ಅಳವಡಿಸಿದ್ದಾರೆ. ನಾನು ಹೇಳಿದಂಥ ಪ್ರಾಜೆಕ್ಟ್ ಪುಸ್ತಕ ಇದೇ. ಇದು ಏರಡಕ್ಕೂ ತಾವು ಏನು ಹೇಳುತ್ತೀರಿ ಏನ್ನುವಂಥ ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಈ ಒಂದು ಆಸ್ಪತ್ರೆಯ ಬಗ್ಗೆ ಮೊದಲು ನಕಾಶೆಯನ್ನು ತಯಾರು ಮಾಡುವಾಗ ಒಂದು ಶಾಖೆ ಇರತಕ್ಕಂಥ ಒಂದು ಆಸ್ಪತ್ರೆಯನ್ನು ಮಾಡಬೇಕು ಎಂದು ಹೇಳುವಂಥ ಚಿಂತನೆ ಇದ್ದದ್ದು ನಿಜ. ಇದು ತಮಗೆ ಗೊತ್ತಿದೆ, ಒಂದು ಕೋಟಿ ರೂಪಾಯಿಗಳ ಅನುದಾನವನ್ನೂ ಕೂಡ ಬಿಡುಗಡೆ ಮಾಡಿ ಈ ಕೆಲಸ ವಿವಿಧ ಹಂತದಲ್ಲಿದೆ. ಆದರೆ ಇಪತ್ತು ವರ್ಷ ಬ್ಯಾಂಕ್ ಯೋಜನೆಯಡಿಯಲ್ಲಿ ಈ ಆಸ್ಪತ್ರೆಯನ್ನೂ ತೆಗೆದುಕೊಳ್ಳಬೇಕು ಎಂದು ಆದರ ಕರಡು ಯೋಜನೆಯಲ್ಲಿ ಇದು ಸೇರಿದೆ. ಆದ್ದರಿಂದ ಈ ಒಂದು ಕೆಲಸವನ್ನು ನಾವು ಹಂತಹಂತವಾಗಿ ಮಾಡಬೇಕಾದಂಥ ಕಾರ್ಯಕ್ರಮಗಳನ್ನೂ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಮಾಡುತ್ತಿರತಕ್ಕಂಥಾದ್ದರಲ್ಲಿ ಅವರು ಕೆಲವು ರೂಪುರೇಷೆಗಳನ್ನು ಹಾಕಿದ್ದಾರೆ. ಆ ರೂಪುರೇಷೆಗಳಲ್ಲಿ 500 ಬಿಡ್ಡಿನ ಆಸ್ಪತ್ರೆ ಮತ್ತು ಇತರ ರೂಪರೇಷೆಗಳನ್ನು ಹಾಕಿದ್ದಾರೆ. ಆದ್ದರಿಂದ ಈಗ ನಾವು ಮೊದಲು ಅದನ್ನು ಅದರೊಳಗೆ ಅಳವಡಿಸಿಕೊಳ್ಳಬೇಕಾಗುತ್ತದೆ. ಮೊದಲು ಅಳವಡಿಸಿಕೊಂಡು, ವಿಶ್ವಬ್ಯಾಂಕಿನ ಯೋಜನೆಯ ನೆರವನ್ನು ಪಡೆಯಲಿಕ್ಕೋಸ್ಕರ ಇದನ್ನು ಈ ಹಂತದಲ್ಲಿ ತೆಗೆದುಕೊಂಡು, ಬಹುಶಃ ಮುಂದೆ ಅವಶ್ಯಕತೆ ಬಿದ್ದಾಗ ಈ ಕೆಲಸವನ್ನೂ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಅವರಿಗೆ ಎಲ್ಲಾ ಗೊತ್ತಿದೆ, ಮುಖ್ಯಮಂತ್ರಿಗಳ ಕ್ಷೇತ್ರ ಅದು, ಅವರಿಗೂ ಕೂಡ ಇದರ ಬಗ್ಗೆ ಹೆಚ್ಚಿನ ಆಸಕ್ತಿ ಇದೆ. ಶಾಖೆಯಿದ್ದು ಬೇಕು ಎಂದರೆ ಅದನ್ನು ಅವರು 500ಕ್ಕೆ ಕದಿಮೆ ಮಾಡುತ್ತಾರೆಯೇ? ಇದು ಅವರದೇ ಕ್ಷೇತ್ರ. ಬಹುಶಃ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಇದನ್ನು ತರುತ್ತಿರತಕ್ಕಂಥ ಸಂದರ್ಭದಲ್ಲಿ ಈ ಕೆಲಸವನ್ನು ಮಾಡುತ್ತಾರೆ. ಮುಂದೆ ಹಂತಹಂತವಾಗಿ ಈ ಕೆಲಸವನ್ನು ನಾವು ಮುಗಿಸುತ್ತೇವೆ.

ಶ್ರೀ ಬಿ. ಶಿವರಾಮು : ಬಹಳ ಪ್ರಮುಖವಾದ ವಿಚಾರ ಪ್ರಸ್ತಾಪ ಮಾಡಿದಿರಿ. ಮುಖ್ಯಮಂತ್ರಿಗಳ ಜಿಲ್ಲೆ, ಅದಕ್ಕೇ ಅವರು ಆ ರೀತಿ ಮಾಡುತ್ತಾರೆಯೇ ಎಂದು. ಅಲ್ಲೇ ವ್ಯತ್ಯಾಸ ಇರತಕ್ಕಂಥಾದ್ದು. ಅಧ್ಯಕ್ಷರೇ, ತಮ್ಮ ಗಮನಕ್ಕೆ ಬಂದು ನಿಜವಾದ ಆಶ್ಚರ್ಯನ್ನ ಈ ಸದನದಲ್ಲಿ ಬೇಕು ಎಂದೇ ಈ ಪ್ರಶ್ನೆಯನ್ನು ಪ್ರಾಮುಖ್ಯವಾಗಿ ನಾನು ತಂದಿದ್ದೇನೆ. 1992ರಲ್ಲಿ ಮಂಜೂರಾಗಿದೆ. ಮುಖ್ಯಮಂತ್ರಿಗಳು ಜಿಲ್ಲೆಗೆ ಬಂದು ಏರಡು ಕಲ ಸ್ಪಷ್ಟಪಡಿಸಿದ್ದಾರೆ, ಶಾಖೆಯ ಹಾಸಿಗೆಯ ಆಸ್ಪತ್ರೆ ಅವಶ್ಯಕತೆ ಇಲ್ಲ ಎನ್ನತಕ್ಕಂಥಾದ್ದನ್ನು ಹೇಳಿ. ಇದು ನಾಗರೀಕರ ಗಮನಕ್ಕೆ ಬಂದು ಅವರೂ ಕೂಡ ಒತ್ತಾಸೆ ಮಾಡಿ ಎಲ್ಲಾ ಮಾಡಿದ್ದಾರೆ.

ಅಧ್ಯಕ್ಷರು : ಈಗ ಇವರೆಲ್ಲರೂ ಸೇರಿ ಅವರ ಮನವೊಲಿಸಿ ಶಾಖೆಯ ಹಾಸಿಗೆಗಳ ಆಸ್ಪತ್ರೆ ಆಗತ್ಯ ಇದೆ ಎಂದು ಹೇಳಿ ಮಾಡಿಸುತ್ತಾರೆ.

ಶ್ರೀ ಬಿ. ಶಿವರಾಮು : ಅದು ಸ್ಪಷ್ಟವಾಗಲೀ ಎನ್ನತಕ್ಕಂಥಾದ್ದಕ್ಕೆ ನಾನು ಕೇಳುತ್ತಿರುವುದು. ಈಗ ಅವರ ಉದ್ದೇಶ ಏನು ಇದ್ದ ಹಾಗಿದೆ ಎಂದರೆ 500ಕ್ಕೆ ಲಿಮಿಟ್ ಮಾಡಬೇಕು, ರೋಗಿಗಳು ಅಷ್ಟೊಂದು ಇಲ್ಲ, ಒಂದು ಸಾವಿರ ಹಾಸಿಗೆಯ ಆಸ್ಪತ್ರೆ ಬೇಕಾಗಿರುವಷ್ಟು ಎಂದು. ಇನ್ನೊಂದರದು ವಿಷಯ ಕೇಳಿಬಿಡುತ್ತೇನೆ. ಭಾಷಣ ಮಾಡುವುದಿಲ್ಲ. ಅಧ್ಯಕ್ಷರೇ, ಬೇಕಾದಷ್ಟು ಅವಕಾಶ ಕೊಟ್ಟು ನಾನು ಕೇಳಬೇಕಾದರೆ ಪ್ರಾಮುಖ್ಯವಾದ ವಿಚಾರ ಇದು.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿದರೆ ಅಂದೇ. ನಮಗೆಲ್ಲಾ ಗೊತ್ತಿದೆ.

ಶ್ರೀ ಬಿ. ಶಿವರಾಮು : ಮುಖ್ಯಮಂತ್ರಿಯ ಜೆಲ್ಲಯದು ಡಲಿಕೇಟಡ್ ಎಂದು ಹೇಳಿ.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿದ ಹಾಗೆ ಮಾಡುವುದು, ಅವರು ಉತ್ತರ ಹೇಳಿದ ಹಾಗೆ ಮಾಡುವುದು. ಹೀಗೆಲ್ಲಾ ಮಾಡಿ ಇಡೀ ರಾಜ್ಯವನ್ನೇ ಹಾಸನಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ ನೀವು, ನಮ್ಮಗೆಲ್ಲಾ ಗೊತ್ತು ನಿಮ್ಮದು.

ಶ್ರೀ ಬಿ. ಶಿವರಾಮು : ಈಗ ಚರ್ಚೆಯಾಗಿ, ನಾಗರೀಕರು ಮುಖ್ಯಮಂತ್ರಿಗಳ ಗಮನಕ್ಕೆ ತಂದು ನಾವು ಜನತಾ ದರ್ಶನಕ್ಕೆ ಬಂದಾಗ ಪ್ರಶ್ನೆ ಮಾಡಿದ್ದಕ್ಕೆ ನನಗೇ ಹೇಳಿದರು, ಇದಕ್ಕೆ ಅವಶ್ಯಕತೆ ಇದಯೇ ನೀವೇ ಹೇಳಿ ಎಂದು ನನ್ನನ್ನು ಪ್ರಶ್ನೆ ಮಾಡಿದರು. ಅದಕ್ಕೆ ನನ್ನ ಅನಿಸಿಕೆ ಏನಿದ ಅಂತ ಹೇಳಿದರೆ, "ಚಿಂತನೆ ಇದೆ ಎನ್ನತಕ್ಕಂಥ ಮಾತನ್ನು" ಸಚಿವರು ಈಗ ಹೇಳಿದರು. ಈ ಚಿಂತನೆ ಸಾವಿರವನ್ನು ಐದನೂರಕ್ಕೆ ಇಳಿಸಬೇಕು ಎನ್ನುವಂಥ ಮೂಲ ಉದ್ದೇಶ ಇದರಲ್ಲಿರತಕ್ಕಂಥಾದ್ದು. ಅದಕ್ಕೇ ಆ ವಿಶ್ವಬ್ಯಾಂಕ್ ಯೋಜನೆಯಲ್ಲಿ 500ರ ಒಳಗಡೆಯದು ಎನ್ನುವ ಮಾತನ್ನು ಹೇಳಿದರು ಮಂತ್ರಿಗಳು. ಅದು ಏಂಡಿತಾ ಆಲ್ಲ. ಶಿವಮೊಗ್ಗದ ಆಸ್ಪತ್ರೆ ಎಷ್ಟು ಹಾಸಿಗೆಗಳ ಆಸ್ಪತ್ರೆ. ಸಾವಿರ ಹಾಸಿಗೆಗಳ ಆಸ್ಪತ್ರೆ 1992ರಲ್ಲೇ ಕೊಟ್ಟಿದ್ದೀವಿ. ಅದನ್ನು ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೇರಿಸಿದ್ದಾರೆ. ವಿಶ್ವಬ್ಯಾಂಕ್ ಯೋಜನೆಯ ಉಪಯೋಗ 500ಕ್ಕೇ ಸೀಮಿತವಾಗಿದ್ದರೆ ನಾನು ಪ್ರಶ್ನೆ ಮಾಡುತ್ತಿರಲಿಲ್ಲ ಅಧ್ಯಕ್ಷರೇ,

ಅಧ್ಯಕ್ಷರು : ಅವರು ಸಾವಿರಕ್ಕೇ ಮಾಡುತ್ತಾರೆ. ಅದಕ್ಕೆ ಏಕೆ ಸಮಯ ವೇಸ್ಟ ಮಾಡುತ್ತೀರಿ. ಕೊಡುತ್ತಾರೆ ಬಿಡಿ.

ಶ್ರೀ ಬಿ. ಶಿವರಾಮು : 500 ಎಂದು ಹೇಳುತ್ತಾರೆ. ಆದರೆ ಸಾವಿರವನ್ನು ಸೇರಿಸಿದ್ದಾರೆ. ಆದ್ದರಿಂದ ಸಾವಿರ ಎಂದೇ ಮಾಡಬಹುದಿತ್ತಲ್ಲ. ಐದೂನೂರು ಎಂದು ಏಕೆ ಲಿಮಿಟ್ ಮಾಡಿದರು ಈ ವಿಶ್ವ ಬ್ಯಾಂಕಿನ ಯೋಜನೆಯಲ್ಲಿ.

ಅಧ್ಯಕ್ಷರು : ಈ ಹಾಸನದವರ ಕ್ಯಾತೆ ಚೆನ್ನಾಗಿ ಬಂತಲ್ಲ.

ಶ್ರೀ ಎಂ. ಸಿ. ನಾಣಯ್ಯ : ಈಗ 350 ಹಾಸಿಗೆ ಇರತಕ್ಕಂಥಾದ್ದು. ಇನ್ನೊಂದು 150 ಅನ್ನು ಸೇರಿಸಿ 500 ಹಾಸಿಗೆ ಇರತಕ್ಕಂಥ ಸಂಬಂಧಪಟ್ಟಹಾಗೆ ಇದು. ಸಾವಿರ ಏಂದು ಹೇಳುತ್ತಿರುವಂಥಾದ್ದು ಮೂವತ್ತು ರೂಪುರೇಷೆ ಆಯಿತು. 500 ಹಾಸಿಗೆ ಇರತಕ್ಕಂಥ ಒಂದು ಕಟ್ಟಡವನ್ನು ಮೊದಲು

ಕಟ್ಟೋಣ. ವಿಶ್ವಬ್ಯಾಂಕ್ ಯೋಜನೆಯಲ್ಲಿ ಅಳವಡಿಸಿಕೊಂಡು ಇದನ್ನು ಮಾಡಿ ಅದಮೇಲೆ ಇನ್ನು 500 ಬೆಡ್ ಬೇಕು ಎನ್ನುವಂಥ ಅವಶ್ಯಕತೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸುವುದಿಲ್ಲವೇ? ಮೊದಲು 500ಕ್ಕೆ ಆಗಲಿ. ಆಮೇಲೆ ಸಾಮರ್ಥ್ಯಕ್ಕೆ ಹೋಗೋಣ.

ಶ್ರೀ ಬಿ. ಶಿವರಾಮು : ಇದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಬಿ. ಶಿವಪ್ಪ : ನಮಗೆ ಬೇಕಾಗಿರುವುದು ಒಂದೇ ಉತ್ತರ. ಹೆಚ್ಚಿಗೆ ಚರ್ಚೆ ಬೇಡ. ಸಾಮರ್ಥ್ಯ ಹಾಸಿಗೆಯ ಆಸ್ಪತ್ರೆ ಎಂದು ಹೇಳಿ ಆದೇಶಾಜ್ಞೆ ಈ ಯಾವುದೋ ಒಂದು ಯೋಜನೆಯಡಿಯಲ್ಲಿ 500 ಮಾಡಿ, ಮತ್ತೆ ಬೇಕಾದರೆ ಸಾಮರ್ಥ್ಯ ಅನ್ನುವ ಬದಲು ಸಾಮರ್ಥ್ಯ ಹಾಸಿಗೆಯ ಆಸ್ಪತ್ರೆ ಹಾಗೆಯೇ ಇದೆ, ಏನು ಮುಂಜೂರಾತಿ ಆಗಿದೆ ಅದು ಹಾಗೇ ಇದೆ ಈಗ 500ಕ್ಕೆ ಮಾಡಿದ್ದೇವೆ ಎಂದು ಹೇಳುತ್ತಿರುವುದನ್ನು ಸಾಮರ್ಥ್ಯಕ್ಕೆ ಮಾಡುತ್ತೇವೆ ಎಂದು ಹೇಳುತ್ತೀರೋ?

ಅಧ್ಯಕ್ಷರು : ಈಗ ಶಿವಪ್ಪನವರೇ, ಅದರ ಮೇಲೆ ಚರ್ಚೆ ಬೇಡ. ಸಾಮರ್ಥ್ಯ ಹಾಸಿಗೆ ಇಡುವುದನ್ನೇ ಮಾಡಿಸೋಣ. ರೋಗಿಗಳು ಹೆಚ್ಚಿಗೆ ಇಲ್ಲ ಎಂದರೆ ಆರೋಗ್ಯವಾಗಿ ಇರುವವರೇ ಹೋಗಿ ಮಲಗಿದ್ದು ಬರಲಿ ಏನು ನಷ್ಟ.

ಶ್ರೀ ಎಂ. ಸಿ. ನಾಣಯ್ಯ : ಸಭಾಧ್ಯಕ್ಷರೇ, ಒಂದು ಉತ್ತರ ಹೇಳುತ್ತೇನೆ. ಒಂದು ಸಾಮರ್ಥ್ಯ ಹಾಸಿಗೆಯ ಆಸ್ಪತ್ರೆಯ ಸಕಾರ ಯಾವುದನ್ನು ಮಾಡಿದ್ದಾರೆ ಅದಕ್ಕೆ ಬದಲಾವಣೆ ಮಾಡಬೇಕು ಎಂದು ಹೇಳುವಂಥ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಅದರ ಬದಲು 500 ಬೆಡ್ಡಿನ ಆಸ್ಪತ್ರೆಯನ್ನು ವಿಶ್ವಬ್ಯಾಂಕಿನ ಆರ್ಥಿಕ ನೆರವಿನ ಅಡಿಯಲ್ಲಿ ಇದಕ್ಕೆ ಲಾಭವಾಗುತ್ತದೆ ಕೂಡ. ಮುಂದಕ್ಕೆ ಅದರ ಬಗ್ಗೆ ವಿಚಾರ ಮಾಡೋಣ.

10.30 ಪಿ.ಎಂ.

ಶ್ರೀ ವಿ.ಟಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಆಸ್ಪತ್ರೆಯನ್ನು ಹಿಂದಿನ ಸರ್ಕಾರ 1000 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಆಡಳಿತಾತ್ಮಕ ಮಂಜೂರಾತಿ ನೀಡಿ ಕಟ್ಟಡದ ಕೆಲಸ ಪ್ರಾರಂಭವಾಗಿತ್ತು. ಅದನ್ನು ಈ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತದೆಯೇ? ಅಥವಾ ಇಲ್ಲವೇ?

ಅಧ್ಯಕ್ಷರು : ಮುಂದುವರಿಸಿಕೊಂಡು ಹೋಗುತ್ತೆಂದು ಹೇಳಿ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಈ ಆಸ್ಪತ್ರೆಯ ಕೆಲಸ ಏನು ಮುಂದುವರೆಯುತ್ತಾ ಇದೆ ಆ ಕೆಲಸ ಮುಂದುವರೆಯುತ್ತಾ ಹೋಗುತ್ತಲೇ ಇದೆ. ಅದರಲ್ಲೇನು ಅದಚಣಕೆ ಇಲ್ಲ. 500 ಹಾಸಿಗೆಗಳನ್ನು ಹೆಚ್ಚು ಮಾಡತಕ್ಕಂಥಕ್ಕೆ ಕೂಡ ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ವಿ. ಟಿ. ರಾಮಸ್ವಾಮಿ : ಒಂದು ಸಾವಿರ ಹಾಸಿಗೆಗಳ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕು. ಅದನ್ನು ಮಾಡುತ್ತೀರೋ ಅಥವಾ ಇಲ್ಲವೇ ಅದನ್ನು ಹೇಳಿ.

ಶ್ರೀ ಜಿ. ಶಿವರಾಮು : 21-1-1992ರಲ್ಲಿ ಸರ್ಕಾರದ ಆದೇಶ ಏನಿದೆ ಅದಕ್ಕೆ ಅಡಳಿತ ಮಂಜೂರಾತಿ ಎಲ್ಲಾ ಕೊಟ್ಟಿದ್ದೀರಿ.

ಅಧ್ಯಕ್ಷರು : ಇದನ್ನು ನೀವೇ ಮಾಡಿಸಿದ್ದು, ನಿಮಗೆ ಬರುತ್ತಿತ್ತು. ಅವರು ಏನು ಹೇಳುತ್ತಾರೆ ಹೇಳಲಿ, ಸಚಿವರಿಗೆ ಅವಕಾಶ ಕೊಡಿ, ಸಮಯ ಕಳೆಯುತ್ತಾ ಬಂತು, ಇನ್ನೂ 3 ಪ್ರಶ್ನೆಗಳು ಇವೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ 1000 ಹಾಸಿಗೆಗಳ ಆಸ್ಪತ್ರೆ ಎಂದು ಈಗಿನ ಸರ್ಕಾರ 500 ಹಾಸಿಗೆಗಳ ಆಸ್ಪತ್ರೆ ಎಂದು ಮಾಡಲಿಕ್ಕೆ ಹೊರಟಿದೆಯೋ ನನಗೆ ಗೊತ್ತಿಲ್ಲ. ಆದರೆ ಇವತ್ತು ಇರತಕ್ಕಂಥ ರೂಪುರೇಷೆಯಲ್ಲಿ 1000 ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟಬೇಕು. ವಿಶ್ವಬ್ಯಾಂಕ್ ಯೋಜನೆಯಲ್ಲಿ ಈಗಿರತಕ್ಕಂಥ ರೂಪರೇಷೆಯ ಅಡಿಯಲ್ಲಿ 500 ಹಾಸಿಗೆಗಳಿಗೆ ಇರತಕ್ಕಂಥ ಆಸ್ಪತ್ರೆಯನ್ನು ಮೊದಲ ಹಂತದಲ್ಲಿ ನಾವು ಮಾಡುತ್ತೇವೆ. ಮುಂದೆ 500 ಹಾಸಿಗೆಗಳು ಇರತಕ್ಕಂಥ ಆಸ್ಪತ್ರೆಯನ್ನು 2ನೇ ಹಂತದಲ್ಲಿ 1000 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಈ ಉತ್ತರದಲ್ಲಿ ಸ್ಪಷ್ಟನೆ ಆಗಲೇ ಇಲ್ಲ.

ಶ್ರೀ ಜಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ದಯವಿಟ್ಟು ತಾವು ನಮ್ಮ ಸಹಾಯಕ್ಕೆ ಬರಬೇಕು. ಕಾನೂನು ಸಚಿವರೇ ಈ ತರಹ ಕಾನೂನನ್ನು ಇಂಟರ್‌ಪ್ರಿಟ್ ಮಾಡದೇ ಹೋದರೆ ಹೇಗೆ? 21-1-1992ರಲ್ಲಿ 1000 ಹಾಸಿಗೆಯ ಆಸ್ಪತ್ರೆಯ ನಿರ್ದೇಶನ ಇಲ್ಲಿದೆ.

ಅಧ್ಯಕ್ಷರು : ಸಾವಿರ ಹಾಸಿಗೆ ಇರುವ ಆಸ್ಪತ್ರೆಯನ್ನು 2 ಹಂತದಲ್ಲಿ ಮಾಡುತ್ತೇವೆಂದು ಸಚಿವರು ಹೇಳಿದ್ದುದು

ಶ್ರೀ ಜಿ. ಶಿವರಾಮು : ಅದರ ಅವಶ್ಯಕತೆ ಎಲ್ಲಿದೆ ಅಧ್ಯಕ್ಷರೆ. ಪುನಃ ಒಂದು ಸಾರಿ ಮಂಜೂರಾತಿ ಆದಮೇಲೆ, ಈಗ ನಿಮ್ಮಲ್ಲಿ ಮಂಜೂರಾತಿ ಆಗಿದೆ ಎಂದು ತಿಳಿದುಕೊಳ್ಳಿ ಅಧ್ಯಕ್ಷರೆ, ದಯವಿಟ್ಟು ತಾವು ಮಂಜೂರಾತಿ ಕೊಡಬೇಕಾದರೆ ಇವತ್ತು Technically it was feasible ಸಾವಿರ ಆಸ್ಪತ್ರೆಗೆ ಎಲ್ಲಾ.

ಅಧ್ಯಕ್ಷರು : ಹಾಸನದಲ್ಲಿ ಯಾವುದೇ ಫೀಸಿಬಲ್ ಯಾವುದು ಇಲ್ಲವೋ ನಮಗೆ ಹೇಗೆ ಗೊತ್ತಾಗಬೇಕು?

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಾವಿರ ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟುವ ಬಗ್ಗೆ ಸರ್ಕಾರಿ ಆದೇಶ ಆಗಿದೆ ಅದರಂತೆ ಮಾಡುತ್ತೇವೆಂದು ಸರ್ಕಾರ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ಹಾಸನಕ್ಕೆ ಯಾವುದು ಫೀಸಿಬಲ್ ಎಂದು ಮೊಯಿಲಿಯವರಿಗೆ ಹಿಂಟ್ ಏನಾದರೂ ಗೊತ್ತಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಅದಲ್ಲ ಇಲ್ಲಿ ಪ್ರಶ್ನೆ. ನಿಜವಾಗಿ ಇಲ್ಲಿ ಪ್ರಶ್ನೆಯನ್ನು ಸದಸ್ಯರು ಏತಕ್ಕೆ ಕೇಳುತ್ತಾರೆ? ಅಂದರೆ ಇಲ್ಲಿ ಒಂದು ಸಾವಿರ ಹಾಸಿಗೆಗಳ ಆಸ್ಪತ್ರೆಯ

ಅವಶ್ಯಕತೆ ಇದಯಂದು ಕ್ಯಾಬಿನೆಟ್ ಅಪ್ರೂವ್ ಮಾಡಿದೆ. ಈಗ ಅದನ್ನು ರಿವೈಸ್ ಮಾಡಬೇಕಾದರೆ It has to go to Cabinet again. ಅಥವಾ ಕ್ಯಾಬಿನೆಟಿನವರು 1000 ಹಾಸಿಗೆಗಳ ಆಸ್ಪತ್ರೆ ಬದಲು 500 ಹಾಸಿಗೆಗಳ ಆಸ್ಪತ್ರೆ ಮಾತ್ರ ಸಾಕು ಎಂದು ಡಿಸೈಡ್ ಆಗಿದ್ದರೆ ಅದನ್ನು ಇಲ್ಲಿ ಹೇಳಲಿ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ 1000 ಹಾಸಿಗೆಗಳ ಆಸ್ಪತ್ರೆ ಹಾಸನದಲ್ಲಿ ಆಗತ್ಯ ಇದಯೆಂದು ನಿರ್ಣಯ ತಗದುಕೊಂಡಿದ್ದಾರೆ. Administrative and technical approval ಆಗಿದೆ. ಕೆಲಸ ಪ್ರಾರಂಭವಾಗಿದೆ. ಇದಲ್ಲಿ ಇರುವಾಗ, ಈಗ 500 ಹಾಸಿಗೆಯುಳ್ಳದ್ದರ ಬಗ್ಗೆ ಹೇಳುತ್ತಿದ್ದಾರೆ ಅದಕ್ಕೆ ದಯವಿಟ್ಟು ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಬಹಳ ಸುಲಭವಾಗಿ ಇದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ತಾವು ನಿಜವಾಗಿ ಅದನ್ನು 500 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಬೇಕೆಂದಾದರೆ ಮಾಡಿ, ಕ್ಯಾಬಿನೆಟಿನಲ್ಲಿ ಇದನ್ನು ತರಿಸಿ ರಿವೈಸ್ ಮಾಡಿಕೊಂಡು ಈ ಹಾಸನದಲ್ಲಿ 1000 ಹಾಸಿಗೆಗಳ ಆಸ್ಪತ್ರೆಯ ಆಗತ್ಯತೆ ಇಲ್ಲ. 500 ಹಾಸಿಗೆಗಳ ಆಸ್ಪತ್ರೆ ಮಾತ್ರ ಆಗತ್ಯ ಎಂದು ಹೇಳಿ ಮಾಡಬೇಕಾಗುತ್ತದೆ. ಇಲ್ಲಿ ಏನು ಉತ್ತರ ಕೊಡಬೇಕೆಂದರೆ, ಇಲ್ಲಿ ಉತ್ತರ ಕೊಡುವಾಗ ಸರಕಾರ ಏನು ನಿರ್ಣಯ ತಗದುಕೊಂಡಿದೆ ಅದನ್ನು ಹೇಳಬೇಕೇ ಹೊರತು ನಿರ್ಣಯ ತಗದುಕೊಂಡಿರದೇ ಬರೀ ಉಹಾಪೋಹಗಳ ಮೇಲೆ ಹೇಳಬಾರದು. ಒಂದು ವೇಳೆ ಇದನ್ನು ತಾವು We will take up again in the Cabinet ಎಂದಾದರೂ ಹೇಳಿ. ಇಲ್ಲಿ 1000 ಹಾಸಿಗೆಗಳ ಆಸ್ಪತ್ರೆಯ ಆಗತ್ಯ ಇಲ್ಲ 500 ಹಾಸಿಗೆಗಳ ಆಸ್ಪತ್ರೆಯ ಆಗತ್ಯ ಮಾತ್ರ ಇದೆ ಎಂದು ಹೇಳಿ ಮಾಡಿ. ಈ ರೀತಿ ಹೇಳುವಾಗ ಕ್ಯಾಬಿನೆಟ್ ಡಿಸಿಷನ್ ಏನು ತಗದುಕೊಳ್ಳುತ್ತದೆ ಆ ಡಿಸಿಷನ್ ನನ್ನು ಈ ಸದನಕ್ಕೆ ಕಮ್ಯುನಿಕೇಟ್ ಮಾಡಬೇಕೇ ಹೊರತು ತಮ್ಮದೇ ಆದಂಥ ನಿರ್ಣಯವನ್ನು ಒಂದು ಇಲಾಖೆಯು ತನ್ನ ಇಚ್ಛಾನುಸಾರ ತಗದುಕೊಂಡ ನಿರ್ಣಯವನ್ನು ಇಲ್ಲಿ ಹೇಳಿದರೆ ಅದು ಸಮಪರ್ಕವಾದಂಥ ಉತ್ತರ ಆಗುವುದಿಲ್ಲ. ಇದು ಒಂದಕ್ಕೆ ಅಲ್ಲ ಎಲ್ಲದಕ್ಕೂ ಈ ಅಂಸ ಅನ್ವಯವಾಗುತ್ತೆ.

SRI. M.C. NANAIAH : Mr. Speaker Sir, let me make it very clear, as at the moment there is no proposal to reduce the bed strength from 1000 to 500. Second thing is, the Government is committed to complete the first phase of the project within a period of one year. The second phase of the project will be taken up later.

ತದೆಹಿಡಿಯಲಾದ ಪ್ರಶ್ನೆಗಳು

ಕೆ.ಜಿ.ಎಫ್.ನ ಅಂಬೇಡ್ಕರ್ ಬಿ.ಎಡ್. ಕಾಲೇಜು

82 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸ್ತುತದಲ್ಲಿ ನಡೆಸಲಾಗುತ್ತಿರುವ ಕೆಜಿಎಫ್‌ನ ಅಂಬೇಡ್ಕರ್ ಬಿ.ಇಡ್ ಕಾಲೇಜು ಅನ್ನು